# JAIN COLLEG

Address: #463/465, 18th Main Road, SS Royal, 80 Feet Road
Rajarajeshwari Nagar, Bangalore - 560 098

**Date: 2019-2020** **II PUC** **Subject: Kannada**

**MOCK 1 QUESTION PAPER**

**9:30 AM – 12:45 PM**

**Time Duration: 3 Hrs 15 Mins** **Total Marks: 100**

I ಒಂದು ವಾಕ್ಯದಲ್ಲಿ ಉತ್ತರಿಸಿ. 10X1=10

1. ಮಯತನೂಜೆ ಯಾರು?
2. ಪಾಂಚಾಲನಂದನೆ ಯಾರು?
3. ಗುರು ಹೇಗೆ ವರ್ತಿಸಬಾರದು?
4. ಹುಸಿನಿದ್ದೆ ಸಾಕು ಎಂದು ಕವಿ ಯಾರಿಗೆ ಹೇಳುತ್ತಾರೆ?
5. ಬಸಲಿಂಗನ ಕಾಯಿಲೆ ದೇಹದ ಮಟ್ಟದಿಂದ ಯಾವ ಸ್ತರವನ್ನು ತಲುಪತೊಡಗಿತ್ತು?
6. ನಮ್ಮ ದೇಶದಲ್ಲಿ ಖಿಲವಾಗಿ ಹೋದ ಧರ್ಮ ಯಾವುದು?
7. ವಸುಧೆಗೆ ಒಡೆಯನೆನಿಸಿದವನು ಯಾರು?
8. ಆನೆಗೆ ಜಗದ್ಗುರುಗಳನ್ನು ಹೊರುವ ಕೆಲಸ ತಪ್ಪಿಹೋದುದೇಕೆ?
9. ರಮೇಶ್‌ಬಾಬು ಯಾರು?
10. ನಿರೂಪಕರಿಗಿದ್ದ ಕೆಟ್ಟ ಕುತೂಹಲ ಯಾವುದು?

II ಅ. ನಾಲ್ಕು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ. *4X2=8*

11. ರಾವಣನು ತನ್ನ ಆಪ್ತರನ್ನು ಕುರಿತು ಏನೆಂದು ಹೇಳಿದನು?
12. ಗಂಡರ್ಯೈವರು ಮೂರು ಲೋಕದ ಗಂಡರಾರು? ಹೆಸರಿಸಿ.
13. ಹಿತ್ತಾಳೆಗಿಂತ ಬಲುಹೀನ ಯಾವುದು?
14. ಮಾಗುವ ಜೀವದ ಪಯಣ ಹೇಗೆ ಸಾಗುತ್ತಿದೆ?
15. ಮುದುಕ ಏನೆಂದು ಗೋಗರೆಯುತ್ತಾನೆ?

ಆ. ಕೆಳಗಿನ ಪ್ರಶ್ನೆಗಳಲ್ಲಿ ಮೂರಕ್ಕೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ. 3X2=6

16. ಸಿಂಹಬಾಲದ ಕೋತಿಗಳಿಗೆ ಒದಗಿದ ತೊಂದರೆ ಏನು?
17. ಯಾವ ಉತ್ತರಗಳಿಂದ ಲೇಖಕಿಗೆ ತೃಪ್ತಿಯಾಗಲಿಲ್ಲ?
18. ಕಲಾಂ ಅವರ ಬದುಕಿನ ಮಂತ್ರ ಯಾವುದು?
19. ಮನೋರಮೆ ಕತೆ ಹೇಳೆಂದು ಕೇಳಲು ಕಾರಣವೇಣು?

ಇ. ಕೆಳಗಿನ ಪ್ರಶ್ನೆಗಳಲ್ಲಿ ಮೂರಕ್ಕೆ ಮಾತ್ರ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ. 3X2=6

20. ಕಾಡಾನೆಗಳ ಹಾವಳಿಗೆ ಪ್ರಕಾಶ್ ನೀಡಿದ ಕಾರಣಗಳೇನು?
21. ಆನೆ ಮರತಳ್ಳುವ ಬಗೆಯನ್ನು ನಿರೂಪಕರು ಹೇಗೆ ವಿವರಿಸಿದ್ದಾರೆ?
22. ನಾಯನ್ನು ಕೊಲ್ಲದೇ ನೌಕರರು ಸುಳ್ಳು ಹೇಳಿರುವರೆಂದು ನಿರೂಪಕರು ಯಾವ ಸಲಹೆ ನೀಡಿದರು?

23.ಖೇಡಿಗಳು ನಾಗರಾಜನನ್ನು ಖೂನಿ ಮಾಡಿರುವರೆಂದು ರಾಮಪ್ಪ ಹೇಗೆ ವಿವರಿಸಿದನು?

III ಅ. ಕೆಳಗಿನ ಯಾವುದಾದರು ಎರಡು ವಾಕ್ಯಗಳನ್ನು ಕುರಿತು ಸಂದರ್ಭ ಸ್ವಾರಸ್ಯ ಬರೆಯಿರಿ. 2X3=6

24. ತಾನೆ ಲಘುಮಾಡಿ ಲಘುವಾದೆನಯ್ಯ
25. ಬಿನ್ನಾಣದ ಮಾತಿಗೆ ಕೊನೆಯಿಲ್ಲ.
26. ಮನ್ನಿಸಲಿ ನಿಮ್ಮನ್ನ ಆ ದೇವರೆ!

ಆ. ಕೆಳಗಿನ ಯಾವುದಾದರೂ <u>ಒಂದು</u> ವಾಕ್ಯವನ್ನು ಕುರಿತು ಸಂದರ್ಭ ಸ್ವಾರಸ್ಯ ಬರೆಯಿರಿ. 1X3=3

27. ಆತನ ಈಜಿಗೆ ಮೀನುಗಳೇ ನಾಚಬೇಕು.
28. ನಿನಗಾವ ರಸದೊಳಿಷ್ಟಂ?

ಇ. ಕೆಳಗಿನ ಯಾವುದಾದರು <u>ಒಂದು</u> ವಾಕ್ಯವನ್ನು ಕುರಿತು ಸಂದರ್ಭ ಸ್ವಾರಸ್ಯ ಬರೆಯಿರಿ. 1X3=3

29.ಕುಶಾಲಿಗಂತ ಸೊಂಡಿಲು ಬೀಸಿದರೆ ಸಾಕಲ್ಲ.
30. ನಾಗರಾಜನ ಕೋವಿ ಸಿಕ್ಕಿದೆ. ಆದರೆ ಹೆಣ ಸಿಗಲಿಲ್ಲ.

IV ಅ. ಕೆಳಗಿನ ಯಾವುದಾದರು <u>ಮೂರು</u> ಪ್ರಶ್ನೆಗಳಿಗೆ ಐದಾರು ವಾಕ್ಯದಲ್ಲಿ ಉತ್ತರಿಸಿ. 3X4=12

31.ಉರಿಲಿಂಗ ಪೆದ್ದಿಯ ವಚನಗಳಲ್ಲಿನ ಆಶಯವೇನು?
32. ನಿರ್ಮಲ ಚಿತ್ತದ ಅಗತ್ಯವನ್ನು ಸೋಮನಾಥ ಹೇಗೆ ನಿರೂಪಿಸಿದ್ದಾನೆ?
33. ಗರತಿ ತವರಿಗೆ ಏನೆಂದು ಹರಸುತ್ತಾಳೆ?
34. 'ಶಿಲುಬೆ ಏರಿದ್ದಾನೆ'ಕವನದಲ್ಲಿ ಜೀಸಸ್ ವ್ಯಕ್ತಿತ್ವ ಮತ್ತು ಆತನ ಮಹತ್ವವನ್ನು ಕವಿ ಯಾವ ರೀತಿ ನಿರೂಪಿಸಿದ್ದಾರೆ? ವಿವರಿಸಿ.

ಆ. ಕೆಳಗಿನ ಯಾವುದಾದರು ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯದಲ್ಲಿ ಉತ್ತರಿಸಿ. 2X4=8

35.ಬಸಲಿಂಗ ಕೊನೆಯಲ್ಲಿ ತೆಗೆದುಕೊಂಡ ನಿರ್ಧಾರ ಯಾವುದು? ಅದಕ್ಕೆ ಕಾರಣಗಳೇನು?
36. ಅಬಿವೃದ್ಧಿ ತರುವ ಪ್ರಾಕೃತಿಕ ನಾಶದ ಸ್ವರೂಪವನ್ನು ಪಠ್ಯದ ಹಿನ್ನಲೆಯಲ್ಲಿ ವಿವರಿಸಿ.
37.ಮುದ್ದಣ – ಮನೋರಮೆಯರ ಸಂವಾದದ ಸ್ವಾರಸ್ಯವನ್ನು ವಿವರಿಸಿ.

ಇ. ಕೆಳಗಿನ ಯಾವುದಾದರು <u>ಎರಡು</u> ಪ್ರಶ್ನೆಗಳಿಗೆ ಐದಾರು ವಾಕ್ಯದಲ್ಲಿ ಉತ್ತರಿಸಿ. 2X4=8

38.ದುರ್ಗಪ್ಪನಿಗೆ ಲೈನ್‌ಮನ್ ಕೆಲಸ ರೋಸಿ ಹೋಗಲು ಕಾರಣಗಳೇನು?
39. ನಾಗರಾಜನ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯಗಳೇನು?
40.'ಕೃಷ್ಣೇಗೌಡನ ಆನೆ' ಕಥೆಯಲ್ಲಿ ಬರುವ ಭ್ರಷ್ಟ ವ್ಯವಸ್ಥೆಯ ಚಿತ್ರಣವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

V ಅ. ಕೆಳಗಿನ ಯಾವುದಾದರು <u>ಒಂದು</u> ಪದ್ಯದ ಭಾವಾರ್ಥ ಬರೆಯಿರಿ. 1X5-5

41.ಕಾಲಯಮ ಕೆರಳಿದೊಡೆ ಮುರಿವೆ
ಜ್ವಾಳುತನದವರೆನ್ನನೊಬ್ಬಳ
ನಾಳಲಾರಿರಿ ಪಾಪಿಗಳಿರಪಕೀರ್ತಿಗಳುಕಿರಲ
ತೋಳ ಹೊರೆ ನಿಮಗೇಕೆ ಭೂಮಿ
ಪಾಲ ವಂಶದೊಳುದಿಸಲೇತಕೆ
ಕೂಳುಗೇಡಿಂಗೊಡಲ ಹೊರುವಿರಿಯೆಂದಳಿಂದುಮುಖಿ.

ಅಥವಾ

42. ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಗಳಂ ಕೇಳುತಂ
ಕೆಲವಂ ಮಾಳ್ಪವರಿಂದ ಕಂಡು ಕೆಲವಂ ಸುಜ್ಞಾನದಿಂ ನೋಡುತಂ
ಕೆಲವಂ ಸಜ್ಜನ ಸಂಘದಿಂದಲರಿಯಲ್ ಸರ್ವಜ್ಞನಪ್ಪಂ ನರಂ
ಪಲವುಂ ಪಳ್ಳಂ ಸಮುದ್ರವೈ ಹರಹರಾ ಶ್ರೀಚೆನ್ನಸೋಮೇಶ್ವರಾ.

## VI **ಭಾಷಾಭ್ಯಾಸ**

ಆ. ಕೆಳಗಿನ ಆರು ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. 2X6=12

43. ನಾನಾರ್ಥ ಬರೆಯಿರಿ : ಸಾರು . ಗುರು .
44. ವಿಭಕ್ತಿ ಪ್ರತ್ಯಯ ಬರೆಯಿರಿ :ಇವರೊಳ್ , ರಮೇಶನ .
45. ಕ್ರಿಯಾಪದದ ಕಾಲ ಬರೆಯಿರಿ :ನಿಂತರು, ಕಟ್ಟುವರು
46. ಸಮಾನಾರ್ಥ ಬರೆಯಿರಿ :ಮಾರ, ಮರ್ಕಟ
47. ತದ್ಭವ ಬರೆಯಿರಿ :ಆಶಾ, ಅಗ್ನಿ
48. ನುಡಿಗಟ್ಟನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ :ನಾಲಿಗೆ ಬಿಗಿಹಿಡಿ, ಕೈ ಬೆಚ್ಚಗೆ ಮಾಡು
49. ದ್ವಿರುಕ್ತಿ ಪದಕ್ಕೆ ಎರಡು ಉದಾಹರಣೆ ಬರೆಯಿರಿ.

ಇ. ಈ ಕೆಳಗಿನ ಯಾವುದಾದರು ಒಂದನ್ನು ಕುರಿತು ಪ್ರಬಂದ ಬರೆಯಿರಿ. 1X5=5

50. ಹೆಚ್ಚುತ್ತಿರುವ ವೃದ್ಧಾಶ್ರಮಗಳು.
51. ಸ್ತ್ರೀ ಭ್ರೂಣಹತ್ಯೆಯಿಂದ ಎದುರಾಗುವ ಸಮಸ್ಯೆಗಳು.

ಈ. ಕೆಳಗಿನವುಗಳಲ್ಲಿ ಒಂದಕ್ಕೆ ಉತ್ತರಿಸಿ. 1X4=4

52. ನಿಮ್ಮ ಮುಂದಿನ ಉನ್ನತ ವಿದ್ಯಾಭ್ಯಾಸಕ್ಕಾಗಿ ವರ್ಗಾವಣೆ ಪತ್ರ, ಅಂಕಪಟ್ಟಿ ಕೋರಿ ಪ್ರಾಂಶುಪಾಲರಿಗೊಂದು ಪತ್ರ ಬರೆಯಿರಿ.
53. ಕಾಲೇಜು ವತಿಯಿಂದ ಪ್ರವಾಸಕ್ಕೆ ತೆರಳಲು ಅನುಮತಿ ಕೋರಿ ತಂದೆಗೊಂದು ಪತ್ರ ಬರೆಯಿರಿ.

ಉ. ಒಂದು ಗಾದೆಯನ್ನು ವಿಸ್ತರಿಸಿ ಬರೆಯಿರಿ. 1X4=4

54. ಅಪಾಯ ಬಂದಾಗ ಉಪಾಯದಿಂದ ಗೆಲ್ಲಬೇಕು
55. ಊರು ಉಪಕಾರವರಿಯದು, ಹೆಣ ಶೃಂಗಾರವರಿಯದು.

*******************************